## ಶ್ರಾವಣ ಮಾಸ



ಚಿದಾನಂದ ಪಾಟೀಲ ಸಾಹೇಬರು ಪ್ರತಿದಿನ ಒಂದು ಬಾರ್‌ಗೆ ಬಂದು, ಮೂರು ಗ್ಲಾಸ್‌ನಲ್ಲಿ ಬಿಯರ್ ಸುರುವಿ, ಮೂರೂ ಗ್ಲಾಸುಗಳಿಂದ ಒಂದೊಂದು ಗುಟುಕು ಬಿಯರ್ ಹೀರುತ್ತಿದ್ದರು. ಒಮ್ಮೆ ವೇಟರ್ ಕುತೂಹಲದಿಂದ, 'ಯಾಕೆ ಸಾರ್ ಮೂರು ಗ್ಲಾಸಿನಲ್ಲಿ ಬಿಯರ್ ಸುರುವಿ ಕುಡಿಯುತ್ತೀರಿ? ಒಂದೇ ಗ್ಲಾಸಿನಿಂದ ಕುಡಿಯಬಹುದಲ್ಲ?' ಎಂದು ಕೇಳಿದ. ಪಾಟೀಲ ಸಾಹೇಬರು, 'ನಾವು ಮೂರು ಜನ ಬಾಲ್ಯ ಸ್ನೇಹಿತರು. ಯಾವಾಗಲೂ ನಾವು ಜೊತೆಯಾಗಿಯೇ ಬಾರ್‌ಗೆ ಬರುತ್ತಿದ್ದೆವು. ಈಗ ಅವರಿಬ್ಬರೂ ವಿದೇಶದಲ್ಲಿದ್ದಾರೆ. ಅವರ ನೆನಪಿನಲ್ಲಿ ನಾನೇ ಮೂರು ಗ್ಲಾಸ್ ಇಟ್ಟುಕೊಂಡು ಕುಡಿಯುತ್ತೇನೆ. ಇದರಿಂದ ಅವರು ನನ್ನೊಂದಿಗೇ ಇದ್ದಾರೆಂದು ಸಮಾಧಾನವಾಗುತ್ತದೆ' ಎಂದ.

ಒಮ್ಮೆ ಪಾಟೀಲರು ಎರಡೇ ಗ್ಲಾಸಿಗೆ ಬಿಯರ್ ಹಾಕಿಕೊಂಡು ಕುಡಿಯುವುದನ್ನು ನೋಡಿದ ವೇಟರ್, 'ಯಾಕೆ ಸರ್? ನಿಮ್ಮ ಸ್ನೇಹಿತರಲ್ಲಿ ಒಬ್ಬರು ಹೋಗಿಬಿಟ್ಟರೆ?' ಎಂದು ಕೇಳಿದ. 'ಇಲ್ಲಯ್ಯ, ಶ್ರಾವಣ ಮಾಸವಲ್ಲವೆ? ನಾನು ಕುಡಿಯುವುದಿಲ್ಲ. ಅವರಿಬ್ಬರ ಪಾಲಿನ ಬಿಯರ್ ಕುಡಿಯುತ್ತಿದ್ದೀನಿ, ಅಷ್ಟೆ' ಎಂದರು.

**ಎ.ಎ. ಸನದಿ**

---



ಕಲೆ: ಗಣೇಶ ಆಚಾರ್ಯ

## ಉಪಕಾರ

ರಮೇಶ ಹೆಂಡತಿಯೊಂದಿಗೆ ವಸ್ತುಪ್ರದರ್ಶನಕ್ಕೆ ಹೋಗಿದ್ದ. ಕೆಲಸಮಯದ ನಂತರ ಅವಳು ಎಲ್ಲೋ ಕಳೆದು ಹೋದಳು. ಎಷ್ಟು ಹುಡುಕಿದರೂ ಕಾಣಲಿಲ್ಲ. ಅಷ್ಟರಲ್ಲಿ ಚೆಲುವೆಯೊಬ್ಬಳು ಎದುರಾದಳು. ಗುಂಡ, 'ಮೇಡಂ, ತಮ್ಮಿಂದ ಒಂದು ಸಹಾಯ ಆಗಬೇಕಿತ್ತು. ದಯವಿಟ್ಟು ನನ್ನ ಜೊತೆ ಸ್ವಲ್ಪ ಹೊತ್ತು ಮಾತನಾಡುವಿರಾ?' ಎಂದ. 'ಯಾಕೆ?' ಎಂದಳು ಅಚ್ಚರಿಯಿಂದ. 'ಬಹಳ ಹೊತ್ತಿನಿಂದ ನನ್ನ ಹೆಂಡತಿ ಕಾಣುತ್ತಿಲ್ಲ. ನಿಮ್ಮ ಜೊತೆ ಮಾತನಾಡುವುದನ್ನು ನೋಡಿದರೆ ಅವಳು ಎಲ್ಲಿದ್ದರೂ ಓಡಿ ಬರುತ್ತಾಳೆ' ಎಂದ!

**ಶಂಕರೇಗೌಡ ತುಂಬಕೆರೆ**